**<u>ಸಾಕ್ಷಿಯನ್ನು ದಿನಾಂಕಃ 01-10-2024 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀ ಸವಾಲು ವಾದಿ ಪರ ವಕೀಲರವರಿಂದಃ</u>**

ಈ ದಿನ ನ್ಯಾಯಾಲಯಕ್ಕೆ ಬರಲು ನ್ಯಾಯಾಲಯವು ಸಮನ್ಸ್ ನೀಡಿರುವುದಿಲ್ಲ. ಸಾಕ್ಷಿ ಪ್ರಮಾಣ ಪತ್ರವನ್ನು ಬರೆಯಲು ಬಸವರಾಜಪ್ಪ ರವರು ಮಾಹಿತಿಯನ್ನು ನೀಡಿರುವರು. ಈ ಕೇಸನ್ನು ಯಾರು ದಾಖಲು ಮಾಡಿರುವರು ಎಂದು ನನಗೆ ಮಾಹಿತಿ ಇರುವುದಿಲ್ಲ. ಈ ಕೇಸನ್ನು ಯಾರ ವಿರುದ್ಧ ದಾಖಲು ಮಾಡಿರುವರು ಎಂದು ನನಗೆ ಮಾಹಿತಿ ಇರುವುದಿಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಉಲ್ಲೇಖಿಸಿರುವ ಕ್ರಯ ಕರಾರಿನಲ್ಲಿ ಎಷ್ಟು ಆಸ್ತಿಗಳಿವೆ ಎಂದು ನನಗೆ ಮಾಹಿತಿ ಇಲ್ಲ. ಸದರಿ ಆಸ್ತಿಗಳು ಎಷ್ಟು ಕ್ರಯಕ್ಕೆ ಮಾರಾಟ ಆದವು ಎಂದು ನನಗೆ ಮಾಹಿತಿ ಇಲ್ಲ. ದಿಃ28.02.1996 ರಲ್ಲಿ ನಡೆದ ವ್ಯವಹಾರದ ಕುರಿತು ನನಗೆ ಯಾವುದೇ ವೈಯಕ್ತಿ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಸದರಿ ಕರಾರು ಪತ್ರಕ್ಕೆ ನನ್ನ ತಂದೆ ಸಹಿ ಮಾಡಿದ್ದರು.

ನನಗೆ ಗೊತ್ತಿರುವಂತೆ ಈಗ ದಾವಾ ಸ್ವತ್ತು 3 ನೇ ಪ್ರತಿವಾದಿಯ ಸ್ವಾಧೀನದಲ್ಲಿರುವುದು. ಬಸವರಾಜಪ್ಪರವರು ಹೊಲದ ಸ್ವಾಧೀನದಲ್ಲಿರುವರು. ಬೇರೆ ಆಸ್ತಿಗಳು ಅವರ ಸ್ವಾಧೀನದಲ್ಲಿರುವ ಕುರಿತು ನನಗೆ ಮಾಹಿತಿ ಇಲ್ಲ. ಪ್ರಮಾಣ ಪತ್ರದಲ್ಲಿ 3 ನೇ ಪ್ರತಿವಾದಿ ದಾವಾ 1 ಮತ್ತು 2 ನೇ ಆಸ್ತಿಗಳ ಸ್ವಾಧೀನದಲ್ಲಿ ಇರುವರು ಎಂದು ಬರೆಸಿರುವ ವಿಚಾರ ಸರಿಯಿದೆಯೇ ಎಂದರೆ ಹೊಲ ಮಾತ್ರ ಅವರ ಸ್ವಾಧೀನದಲ್ಲಿರುತ್ತದೆ ಎಂದು ಸಾಕ್ಷಿ ನುಡಿದರು. ಸದರಿ ಹೊಲದ ವಿಸ್ತೀರ್ಣ ಎಷ್ಟಿದೆ ಎಂದು ನನಗೆ ಗೊತ್ತಿಲ್ಲ. ಎಷ್ಟು ಜನ ಅದನ್ನು ಸಾಗುವಳಿ ಮಾಡುವರು ಎಂದು ನನಗೆ ಗೊತ್ತಿಲ್ಲ. ದಾವಾ ಹೊಲದ ಪೂರ್ವಕ್ಕೆ ರಸ್ತೆ ಇರುವುದು, ದಕ್ಷಿಣಕ್ಕೆ ಇಟಗಿಯವರ ಹೊಲ, ಪಶ್ಚಿಮಕ್ಕೆ ಸಾರಥಿಯರ ಹೊಲ, ಉತ್ತರಕ್ಕೆ ಮಲ್ಲಪ್ಪಳ ಅಣ್ಣಪ್ಪ ರವರ ಹೊಲ ಇರುವುದು.

ಸರ್ವೇ ನಂ. 75 ರಲ್ಲಿ ಯಾರು ಎಷ್ಟು ಕ್ಷೇತ್ರದ ಸ್ವಾಧೀನದಲ್ಲಿರುವರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನನಗೆ ದಾವಾ ಮನೆಯ ನಂಬರ್, ವಿಸ್ತೀರ್ಣ ಹಾಗೂ ಚೆಕ್ಕುಬಂದಿ ಗೊತ್ತಿಲ್ಲ. ದಾವಾ ಮನೆ ಯಾರ ಸ್ವಾಧೀನದಲ್ಲಿದೆ ಎಂದು ನನಗೆ ಗೊತ್ತಿಲ್ಲ. ನಾನು ಹಾಗೂ 3 ನೇ ವಾದಿ ವಿಶ್ವಾಸಿಕರು ಎಂದರೆ ಸರಿಯಲ್ಲ. ಅವರು ನನಗೆ ಪರಿಚಯಸ್ಥರು. 3 ನೇ ಪ್ರತಿವಾದಿಯ ಹೇಳಿಕೆಯ ಮೇರೆಗೆ ನನಗೆ ಈ ಕೇಸಿನ ಕುರಿತು ಯಾವುದೇ ಮಾಹಿತಿ ಇಲ್ಲದಿದ್ದರೂ ಸಹಿತ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

O.S. 264/2013
D.W.3

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

01.10.2024

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**